**ಸಾಕ್ಷಿಗೆ ದಿನಾಂಕಃ06-05-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು :: ಆರೋಪಿ ಪರ ಶ್ರೀ. SR ವಕೀಲರಿಂದ ::**

ನಾನು ರಂಗೇನಹಳ್ಳಿಯಲ್ಲಿ ಒಂದು ವೈನ್ ಸ್ಟೋರ್ ಅನ್ನು ನಡೆಸುತ್ತಿದ್ದೇನೆ. ಸದರಿ ವೈನ್ ಸ್ಟೋರ್ ಗೆ ಸಂಬಂಧಪಟ್ಟಂತೆ Excise ಹಾಗೂ ಇತರೇ ಕಂದಾಯಗಳನ್ನು ನಾನು ಸರ್ಕಾರಕ್ಕೆ ಪಾವತಿ ಮಾಡುತ್ತೇನೆ. ನನಗೆ ಆರೋಪಿ ಸುಮಾರು 8-10 ವರ್ಷಗಳಿಂದ ಪರಿಚಯ. ನನ್ನ ಮನೆಯ ಎದುರುಗಡೆ ವಿಜಯ ಬ್ಯಾಂಕ್ ಇದ್ದು ಆರೋಪಿಯು ಅದರಲ್ಲಿ ಕೆಲಸ ಮಾಡುತ್ತಿದ್ದು ನಾನು ಬ್ಯಾಂಕ್ ಗೆ ಹೋಗುತ್ತಿದ್ದ ಸಮಯದಲ್ಲಿ ಅವರು ನನಗೆ ಪರಿಚಯ ಇರುತ್ತಾರೆ. ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಆರೋಪಿಯು ರಂಗೇನಹಳ್ಳಿ ವಿಜಯ ಬ್ಯಾಂಕ್ ಶಾಖೆಯಿಂದ 2020-21 ನೇ ಸಾಲಿನಲ್ಲಿ ವರ್ಗಾವಣೆ ಆಗಿರುತ್ತಾರೆ. ಆರೋಪಿಯು 2013 ನೇ ಸಾಲಿನಲ್ಲಿ ರಂಗೇನಹಳ್ಳಿ ಬ್ಯಾಂಕ್ ಶಾಖೆಯಿಂದ ಕರಕುಚ್ಚಿ ಬ್ಯಾಂಕ್ ಶಾಖೆಗೆ ವರ್ಗಾವಣೆ ಆಗಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ನನಗೆ ನಿಖರವಾಗಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 2013 ನೇ ಸಾಲಿನಲ್ಲಿ ಆರೋಪಿಯು ರಂಗೇನಹಳ್ಳಿ ಬ್ಯಾಂಕ್ ಶಾಖೆಯಿಂದ ವರ್ಗಾವಣೆಯಾದ ನಂತರ ಅವರು ಯಾವತ್ತು ಸಹ ರಂಗೇನಹಳ್ಳಿಗೆ ಯಾವತ್ತು ಸಹ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರೂ ಸಹ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿಯು ನಾನು ಅವರಿಗೆ ಹಣವನ್ನು ಕೊಟ್ಟ 6 ತಿಂಗಳ ಹಿಂದೆ ಸಾಲವನ್ನು ಕೇಳಿದ್ದರು. ಸದರಿ ಸಾಲವನ್ನು ನಾನು ಆಗಾಗ ಬ್ಯಾಂಕ್ ಗೆ ಹೋಗಿ ಬರುತ್ತಿದ್ದ ಸಮಯದಲ್ಲಿ ಕೇಳಿರುತ್ತಾರೆ. ಆರೋಪಿಗೆ ನಾನು ದಿಃ 23.12.2020 ರಂದು ಮಧ್ಯಾಹ್ನದ ಸಮಯದಲ್ಲಿ ಹಣವನ್ನು ಸಾಲವಾಗಿ ನೀಡಿರುತ್ತೇನೆ. ಆರೋಪಿಯು ನನ್ನ ಮನೆಗೆ ಬಂದು ಸದರಿ ಹಣವನ್ನು ಪಡೆದಿರುತ್ತಾರೆ. ಸದರಿ ಸಮಯದಲ್ಲಿ ಆರೋಪಿ ಒಬ್ಬರೇ ಬಂದಿದ್ದರು.

ಆರೋಪಿ ನನ್ನಲ್ಲಿ ಹಣವನ್ನು ಸಾಲ ಕೇಳಿದ ಸಮಯದಲ್ಲಿ ನಾನು ಮೊದಲಿಗೆ ಒಪ್ಪಿರಲಿಲ್ಲ ನಂತರದಲ್ಲಿ ಆರೋಪಿಯು 4 ತಿಂಗಳಲ್ಲಿ ಹಣವನ್ನು ವಾಪಸ್ಸು ಕೊಡುವುದಾಗಿ

ತಿಳಿಸಿದ ಕಾರಣ ವಿಶ್ವಾಸದ ಮೇರೆಗೆ ನಾನು ಹಣವನ್ನು ಕೊಡಲು ಒಪ್ಪಿರುತ್ತೇನೆ. ಆರೋಪಿಯು ನನ್ನಲ್ಲಿ ಮೊದಲು 40 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ಕೇಳಿದ್ದು, ನಂತರದಲ್ಲಿ ನಾನು 25 ಲಕ್ಷ ಹಣವನ್ನು ಸಾಲವಾಗಿ ಕೊಡಲು ಒಪ್ಪಿರುತ್ತೇನೆ.

2012-14 ರಲ್ಲಿ ಭದ್ರಾವತಿ ಸಂತೆ ಏರಿಯ ಮೈದಾನದ ಪಕ್ಕದಲ್ಲಿ ಆರೋಪಿಯು ಒಂದು ಮನೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಗೆ ಆರೋಪಿಯು 9 ಲಕ್ಷ ಹಣವನ್ನು ಅವರು ಕೆಲಸ ಮಾಡುವ ಬ್ಯಾಂಕ್ ನಿಂದ ಸಾಲವಾಗಿ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ನನ್ನಿಂದ ಅವರು ಭದ್ರಾವತಿಯಲ್ಲಿ ಮನೆ ಕಟ್ಟುವ ಸಲುವಾಗಿ ಅವರು ಸಾಲವನ್ನು ಕೇಳಿದ್ದರು.

ಜನವರಿ 2020 ರಿಂದ COVID-19 ಸಾಂಕ್ರಾಮಿಕ ರೋಗವು ದೇಶದಲ್ಲೇಡೆ ಮೊದಲನೇ ಅಲೆ ಆರಂಭವಾಗಿತ್ತು ಎಂದರೆ ಸರಿ. ಸದರಿ ಸಮಯದಲ್ಲಿ ಸರ್ಕಾರದಿಂದ ಯಾರು ಸಹ ಮನೆಯ ಹೊರಗೆ ಓಡಾಡಬಾರದು ಎಂದು ನಿಷೇಧ ಇತ್ತು ಎಂದರೆ ಸರಿ. ಸದರಿ COVID-19 ಸಾಂಕ್ರಾಮಿಕ ರೋಗವು ಮೊದಲನೇ ಅಲೆ ಮಾರ್ಚ್ 2021 ರವರೆಗೂ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ಸದರಿ ಸಮಯದಲ್ಲಿ ಎಲ್ಲಾ ವ್ಯಾಪಾರಸ್ಥರು ನಷ್ಟ ಅನುಭವಿಸಿದ್ದರು ಎಂದರೆ ಸರಿ. ಸದರಿ ಸಮಯದಲ್ಲಿ ನನಗೂ ಸಹ ವ್ಯಾಪಾರದಲ್ಲಿ ನಷ್ಟ ಉಂಟಾಗಿರುತ್ತದೆ ಎಂದರೆ ಸರಿ.

ನಾನು ಆರೋಪಿಗೆ 25 ಲಕ್ಷ ರೂಪಾಯಿ ಹಣವನ್ನು ನಗದಾಗಿ ನೀಡಿರುತ್ತೇನೆ. ಸದರಿ ಹಣವನ್ನು ನಾನು ಯಾವುದೇ ಬಡ್ಡಿ ಇಲ್ಲದೇ ನೀಡಿರುತ್ತೇನೆ. ಹಣ ಪಡೆದುಕೊಳ್ಳುವ ಸಮಯದಲ್ಲಿ ಆರೋಪಿ ಒಬ್ಬರೇ ಬಂದಿದ್ದರು. ಸದರಿ 25 ಲಕ್ಷ ಹಣವು ನನಗೆ ಯಾವ ಮೂಲದಿಂದ ಬಂದಿರುತ್ತದೆ ಎನ್ನುವ ಬಗ್ಗೆ ನನ್ನ IT Returns ನಲ್ಲಿ ತೋರಿಸಿರುತ್ತೇನೆ. ಆರೋಪಿಗೆ ಸಾಲ ನೀಡಿರುವ ಬಗ್ಗೆ ನನ್ನ IT Returns ನಲ್ಲಿ ತೋರಿಸಿರುವುದಿಲ್ಲ.

ನಾನು ಆರೋಪಿಗೆ ಸದರಿ ಸಾಲವನ್ನು 15 ಲಕ್ಷ ಹಾಗೂ 10 ಲಕ್ಷದಂತೆ ಎರಡು ಕಂತಿನಲ್ಲಿ ನೀಡಿರುತ್ತೇನೆ. ದಿಃ 23.12.2020 ರಂದು ಬೆಳಗ್ಗೆ ಆರೋಪಿಗೆ 15 ಲಕ್ಷ ರೂಪಾಯಿ ನೀಡಿದ್ದು ಸಂಜೆ ಸಮಯದಲ್ಲಿ 10 ಲಕ್ಷ ರೂಪಾಯಿ ನೀಡಿರುತ್ತೇನೆ. ಸದರಿ ವಿಚಾರವನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿ.

25 ಲಕ್ಷ ರೂಪಾಯಿ ಹಣವನ್ನು ನನಗೆ ಒಂದೇ ಕಂತಿನಲ್ಲಿ ಕೊಡಲು ಏನಾದರು ತೊಂದರೆ ಇತ್ತೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಆರೋಪಿಗೆ ಮೊದಲು 15 ಲಕ್ಷ ನೀಡಿದ್ದು ಆರೋಪಿಯು ನಂತರದಲ್ಲಿ 10 ಲಕ್ಷ ಹೆಚ್ಚುವರಿ ನೀಡಲು ಒತ್ತಾಯ ಮಾಡಿದ ಕಾರಣ ಸದರಿ ಹಣವನ್ನು ಸಂಜೆ ಸಮಯದಲ್ಲಿ ನೀಡಿರುತ್ತೇನೆ. ನಾನು ಹೇಳುವಂತೆ ಆರೋಪಿಗೆ ಯಾವುದೇ ಸಾಲವನ್ನು ನೀಡದ ಕಾರಣ ಅದರ ಬಗ್ಗೆ ನನ್ನ IT Returns ನಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಾಲ ನೀಡಿರುತ್ತೇನೆ ಎಂದು ಹೇಳುತ್ತಿರುವ ದಿನದಂದು ನನ್ನ ಬಳಿ 25 ಲಕ್ಷ ರೂಪಾಯಿ ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಇವರೆಗೂ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

ಆರೋಪಿಯು ಸದರಿ ಸಾಲದ ಬಾಬ್ತು ಮರುಪಾವತಿಗಾಗಿ ನಾನು ಸಾಲ ಕೊಟ್ಟ ದಿನವೇ ಅವರ ವಿಜಯ ಬ್ಯಾಂಕ್ ಗೆ ಸಂಬಂಧಪಟ್ಟ 2 ಚೆಕ್ ಗಳನ್ನು ನೀಡಿರುತ್ತಾರೆ. ಅವುಗಳಲ್ಲಿ ಒಂದು ಚೆಕ್ 15 ಲಕ್ಷ ರುಪಾಯಿನದ್ದಾಗಿದ್ದು ಅದರ ಸಂಖ್ಯೆ 572308 ಮತ್ತೊಂದು ಚೆಕ್ 10 ಲಕ್ಷ ರುಪಾಯಿನದ್ದಾಗಿದ್ದು ಅದರ ಸಂಖ್ಯೆ 572309 ಆಗಿರುತ್ತದೆ.

ವಿಜಯ ಬ್ಯಾಂಕ್ ದಿಃ 01.04.2019 ರಂದು Bank of Baroda ದ ಜೊತೆ merge ಆಗಿರುತ್ತದೆ ಎಂದರೆ ಸರಿ. 2020 ನೇ ಸಾಲಿನಷ್ಟರಲ್ಲಿ ವಿಜಯ ಬ್ಯಾಂಕ್ ಚಾಲ್ತಿಯಲ್ಲಿ ಇರಲಿಲ್ಲ ಎಂದರೆ ಸರಿ. ನಾನು ಆರೋಪಿಗೆ ವಿಜಯ ಬ್ಯಾಂಕ್ Bank of Baroda ದ ಜೊತೆ merge ಆಗಿರುವ ಕಾರಣ Bank of Baroda ಗೆ ಸಂಬಂಧಪಟ್ಟ ಚೆಕ್ ಅನ್ನು ನೀಡಲು ಕೇಳಿರುತ್ತೇನೆ, ಆದರೆ ಆರೋಪಿಯು ವಿಜಯ ಬ್ಯಾಂಕ್ ಗೆ ಸಂಬಂಧಪಟ್ಟ ಚೆಕ್ ಈಗಲೂ ಸಹ ಚಾಲ್ತಿಯಲ್ಲಿ ಇರುತ್ತದೆ ಎಂದು ತಿಳಿಸಿದ ಕಾರಣ ನಾನು ಅವುಗಳನ್ನು ಸ್ವೀಕೃರಿಸಿರುತ್ತೇನೆ. ನಾನು ಹೇಳುವಂತೆ ಸದರಿ ವಿಚಾರವನ್ನು ಈಗ ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಜಯ ಬ್ಯಾಂಕ್ ರವರು ಯಾವುದೇ ಉಳಿದ ಚೆಕ್ ಅನ್ನು ವಾಪಸ್ಸು ನೀಡಿ Bank of Baroda ದ ಚೆಕ್ ಗಳನ್ನು ಪಡೆಯಲು ಕೇವಲ ಒಂದು ವರ್ಷ ಕಾಲಾವಕಾಶ ನೀಡಿದ್ದರು ಎಂದರೆ ಸರಿಯಲ್ಲ. ನಾನು ಚೆಕ್‌ಗಳನ್ನು ಹಾಜರುಪಡಿಸಿದ ದಿನಾಂಕದಂದು ವಿಜಯ ಬ್ಯಾಂಕ್ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು Bank of Baroda ರಂಗೇನಹಳ್ಳಿ ಶಾಖೆಯ ಮ್ಯಾನೇಜರ್ ರವರ ಜೊತೆ ಶಾಮಿಲಾಗಿ ಆರೋಪಿಯ

2 ಚೆಕ್ ಗಳನ್ನು ಹಾಜರುಪಡಿಸಿ ನಿಪಿ2 ರಂತೆ ಸುಳ್ಳು ಹಿಂಬರಹವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

25 ಲಕ್ಷ ರೂಪಾಯಿ ಹಣ ದೊಡ್ಡ ಮೊತ್ತ ಎಂದರೆ ಸರಿ. 25 ಲಕ್ಷ ಹಣಕ್ಕೆ ಸಂಬಂಧಪಟ್ಟಂತೆ ಚೆಕ್ ಅನ್ನು ಹೊರತುಪಡಿಸಿ ಭದ್ರತೆಗಾಗಿ ಇತರೇ ಯಾವುದೇ ದಾಖಲಾತಿಗಳನ್ನು ಆರೋಪಿಯಿಂದ ನಾನು ಪಡೆದಿರುವುದಿಲ್ಲ. ಆರೋಪಿಯಿಂದ ನಾನು ಹಣವನ್ನು ವಾಪಸ್ಸು 3-4 ಬಾರಿ ಕೇಳಿದ್ದು ಕೊನೆಯ ಬಾರಿ ಅವರ ಮನೆಯ ಬಳಿ ಹೋಗಿ ವಿಚಾರಿಸಿರುತ್ತೇನೆ. ಯಾವ ದಿನಾಂಕಗಳಂದು ಆ ರೀತಿ ಕೇಳಿರುತ್ತೇನೆ ಎಂದು ನನಗೆ ನಿಖರವಾಗಿ ಹೇಳಲು ನೆನಪಿಲ್ಲ. ನಾನು ಆರೋಪಿಯ ಮನೆಯ ಬಳಿ ಯಾವತ್ತು ಸಹ ಹೋಗಿರುವುದಿಲ್ಲ ಮತ್ತು ಯಾವತ್ತು ಸಹ ಅವರಿಂದ ಹಣ ವಾಪಸ್ಸು ನೀಡಲು ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

ದಿಃ 23.04.2021 ರಂದು ಬ್ಯಾಂಕ್ ಗೆ ನಿಪಿ1 ಚೆಕ್ ಅನ್ನು ಹಾಜರುಪಡಿಸಿರುತ್ತೇನೆ. ಸದರಿ ವಿಚಾರವನ್ನು ಪಿರ್ಯಾದಿಯಲ್ಲಿ ತಿಳಿಸಿರುತ್ತೇನೆ. ಸದರಿ ವಿಚಾರವನ್ನು ನನ್ನ ಪಿರ್ಯಾದಿಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ಚೆಕ್ ಗೆ ಸಂಬಂಧಪಟ್ಟ ಬ್ಯಾಂಕ್ ಖಾತೆಯನ್ನು ಆರೋಪಿಯು 2018 ರಲ್ಲಿ ಮುಚ್ಚಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರೂ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸದರಿ ಪ್ರಕರಣದ ವ್ಯವಹಾರವನ್ನು ಹೊರತುಪಡಿಸಿ ನಾನು ಆರೋಪಿಯ ಜೊತೆ ಬೇರೆ ಯಾವುದೇ ಹಣದ ವ್ಯವಹಾರ ಮಾಡಿರುವುದಿಲ್ಲ. ಆರೋಪಿ 2012-14 ನೇ ಸಾಲಿನಲ್ಲಿ ಮನೆ ಕಟ್ಟುವ ಕಾರಣದಿಂದ ನನ್ನಿಂದ ಕೇವಲ 5 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ಪಡೆದಿದ್ದರೂ ಎಂದರೆ ಸರಿಯಲ್ಲ. ಸದರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಭದ್ರತೆಗಾಗಿ ಆರೋಪಿಯು ಅವರ ವಿಜಯ ಬ್ಯಾಂಕ್ ರಂಗೇನಹಳ್ಳಿ ಶಾಖೆಗೆ ಸಂಬಂಧಪಟ್ಟ 10 ಸಹಿ ಮಾಡಿರುವ ಖಾಲಿ ಚೆಕ್ ಗಳನ್ನು ನನಗೆ ನೀಡಿದ್ದರು ಎಂದರೆ ಸರಿಯಲ್ಲ.

ನನ್ನ ಬ್ಯಾಂಕ್ ಅಕೌಂಟ್ ನಂಬರ್ ನ ಕೊನೆಯ 4 ಸಂಖ್ಯೆಗಳು 9217 ಆಗಿರುತ್ತದೆ ಎಂದರೆ ಸರಿ. ದಿಃ 20.07.2019 ರಂದು ಆರೋಪಿಯು ಅವರು ಹಿಂದೆ ಪಡೆದಿದ್ದ 5 ಲಕ್ಷ

ರೂಪಾಯಿ ಸಾಲವನ್ನು ನನ್ನ ಬ್ಯಾಂಕ್ ಖಾತೆಗೆ RTGS ಮುಖಾಂತರ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನದಂದು ಆರೋಪಿಯು ನನ್ನ ಬ್ಯಾಂಕ್ ಖಾತೆಗೆ 5 ಲಕ್ಷ ರೂಪಾಯಿ ಹಾಕಿದ್ದರು ಎಂದರೆ ಸರಿ. ಸದರಿ ಹಣವನ್ನು ನನ್ನ ಬ್ಯಾಂಕ್ ಖಾತೆಗೆ ಹಾಕಿದ ನಂತರ ಆರೋಪಿಯ ಭದ್ರತೆಗಾಗಿ ನೀಡಿದ 10 ಚೆಕ್ ಗಳನ್ನು ನನ್ನಿಂದ ವಾಪಸ್ಸು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಚೆಕ್ ಗಳು ಕಳೆದು ಹೋಗಿದ್ದು ಅದು ಸಿಕ್ಕಿದ ನಂತರ ಆರೋಪಿಗೆ ವಾಪಸ್ಸು ಕೊಡುವುದಾಗಿ ತಿಳಿಸಿದ ಕಾರಣ ಅವರು ನನ್ನ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರಗಳನ್ನು ತಿಳಿಸಿ ಆರೋಪಿಯು ನನಗೆ ಒಂದು ಪ್ರತ್ಯುತ್ತರ ನೋಟೀಸ್ ಅನ್ನು ನೀಡಿದ್ದರು ಎಂದರೆ ಸರಿ.

2020-21 ನೇ ಸಾಲಿನಲ್ಲಿ ಆರೋಪಿ Bank of Baroda ಭದ್ರಾವತಿಯ ಶಾಖೆಯಲ್ಲಿ assistant manager ಆಗಿ ಕೆಲಸ ನಿರ್ವಹಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಆರೋಪಿಗೆ ತಿಂಗಳಿಗೆ ಒಂದು ಲಕ್ಷಕ್ಕಿಂತ ಅಧಿಕ ಹಣ ಸಂಬಳವಾಗಿ ಬರುತ್ತಿತ್ತು ಎಂದರೆ ಸರಿಯಲ್ಲ. ಆರೋಪಿಯು ಆರ್ಥಿಕವಾಗಿ ಸದೃಡರಾಗಿದ್ದ ಕಾರಣ ಆರೋಪಿ ನನ್ನಿಂದ ಸಾಲವಾಗಿ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ 25 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ನೀಡಲು ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ.

ಸೋಮಶೇಖರಪ್ಪ ಮತ್ತು ಮಂಜಯ್ಯ ರವರು ನನ್ನ ವೈನ್ ಸ್ಟೋರ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಪ್ರವೀಣ್ ಮತ್ತು ಮಹೇಶ್ ರವರು ನನಗೆ ಸಂಬಂಧಿಕರಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಗಳು ನನ್ನ ಸಂಬಂಧಿಕರಾಗಿದ್ದರೂ ದುರುದ್ದೇಶದಿಂದ ಇಲ್ಲ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾನು ಆರೋಪಿಯಿಂದ ಭದ್ರತೆಗಾಗಿ ಪಡೆದ ಚೆಕ್ ಗಳಲ್ಲಿ ಒಂದು ಚೆಕ್ ಅನ್ನು ಮಂಜಯ್ಯ ಎನ್ನುವವರ ಮುಖಾಂತರ ದುರುಪಯೋಗಪಡಿಸಿ ಆರೋಪಿಯ ವಿರುದ್ದ ಮಾನ್ಯ ಹೆಚ್ಚುವರಿ ಸಿವಿಲ್ ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ CC 2217/2021 ರಂತೆ 8 ಲಕ್ಷ ರೂಪಾಯಿ ಹಣಕೋರಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಸೋಮಶೇಖರಪ್ಪ ಎನ್ನುವವರ ಮುಖಾಂತರ ದುರುಪಯೋಗಪಡಿಸಿ ಆರೋಪಿಯ ವಿರುದ್ದ

ಮಾನ್ಯ ಹೆಚ್ಚುವರಿ ಸಿವಿಲ್ ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ CC 2218/2021 ರಂತೆ 5 ಲಕ್ಷ ರೂಪಾಯಿ ಹಣಕೋರಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರವೀಣ್ ಎನ್ನುವವರ ಮುಖಾಂತರ ದುರುಪಯೋಗಪಡಿಸಿ ಆರೋಪಿಯ ವಿರುದ್ದ ಮಾನ್ಯ ಹೆಚ್ಚುವರಿ ಸಿವಿಲ್ ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ CC 2694/2021 ರಂತೆ 15 ಲಕ್ಷ ರೂಪಾಯಿ ಹಣಕೋರಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಮಹೇಶ್ ಎನ್ನುವವರ ಮುಖಾಂತರ ದುರುಪಯೋಗಪಡಿಸಿ ಆರೋಪಿಯ ವಿರುದ್ದ ಮಾನ್ಯ ಹೆಚ್ಚುವರಿ ಸಿವಿಲ್ ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ CC 2754/2021 ರಂತೆ 12 ಲಕ್ಷ ರೂಪಾಯಿ ಹಣಕೋರಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಯಿಂದ ನಾನು ಭದ್ರತೆಗಾಗಿ ಪಡೆದ ಚೆಕ್ ಗಳನ್ನು ನಾನು ವೈಯಕ್ತಿಕವಾಗಿ ಹಾಗೂ ಇತರರ ಮುಖಾಂತರ ದುರುಪಯೋಗಪಡಿಸಿಕೊಂಡು ಅಕ್ರಮವಾಗಿ ಧನ ಲಾಭ ಪಡೆಯುವ ದುರುದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿ ನನ್ನಿಂದ 5 ಲಕ್ಷ ಹಣವನ್ನು ಮಾತ್ರ ಸಾಲವಾಗಿ ಪಡೆದಿದ್ದು ಅದನ್ನು 2019 ನೇ ಸಾಲಿನಲ್ಲಿ ಸಂಪೂರ್ಣ ಮರು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ1 ಚೆಕ್ 2010 ನೇ ಸಾಲಿಗೆ ಸಂಬಂಧಪಟ್ಟ ಚೆಕ್ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಆರೋಪಿಯಿಂದ ಕೇವಲ ಭದ್ರತೆಗಾಗಿ ಪಡೆದ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ನನ್ನಿಂದ 25 ಲಕ್ಷ ಹಣವನ್ನು ಸಾಲವಾಗಿ ಪಡೆದಿರುವುದಿಲ್ಲ ಮತ್ತು ನಿಪಿ1 ಚೆಕ್ ಅನ್ನು ಯಾವುದೇ ಸಾಲದ ಮರು ಪಾವತಿಗಾಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯು ನನಗೆ ಹಣವನ್ನು 4 ತಿಂಗಳ ನಂತರ ಮರು ಪಾವತಿ ಮಾಡುತ್ತಾರೆ ಎಂದು ತಿಳಿರುತ್ತಾರೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯು ನನಗೆ ಯಾವುದೇ ಚೆಕ್ ಅನ್ನು ಬ್ಯಾಂಕ್ ಗೆ ಹಾಜರುಪಡಿಸುವಂತೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವುದೇ ಸಾಲವನ್ನು ಪಡೆಯದಿರುವ ಕಾರಣ ಯಾವುದೇ ಹಣವನ್ನು ನೀಡಲು ಭದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಆರೋಪಿಯನ್ನು ಹೊರತುಪಡಿಸಿ ಬೋರೆಗೌಡ ಮತ್ತು ಕುಶಾಲ್ ಎನ್ನುವವರ ವಿರುದ್ದ ಚೆಕ್ ಅಮಾನ್ಯ ಕೇಸ್ ಅನ್ನು ಹೂಡಿರುತ್ತೇನೆ. ನಾನು ಸರ್ಕಾರದಿಂದ ಯಾವುದೇ ಪರವಾನಗಿ ಪಡೆಯದೇ ಅಕ್ರಮವಾಗಿ ಲೇವಾದೇವಿ ವ್ಯವಹಾರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ಆರೋಪಿಯು 2020 ನೇ ಸಾಲಿನಲ್ಲಿ ಯಾವುದೇ ಮನೆ ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-
ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,
ತರೀಕೆರೆ.

ಸಾಕ್ಷಿಯ ಸಹಿ::